# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 824(882) |
| 2 | ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 14.03.2025 |
| 4 | ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಆಯಾ ಸಾಲಿನಲ್ಲಿ ಶಾಸಕರ ಹೆಸರಿನಲ್ಲಿ ಉಳಿದ ಉಳಿತಾಯ ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಕಾಮಗಾರಿಗಳಿಗೆ ಶಾಸಕರು ಪ್ರಸ್ತಾವನೆ ಸಲ್ಲಿಸಲು ಅವಕಾಶವಿದೆಯೇ: (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು) | - ಹೌದು-<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ-3.2 ರನ್ವಯ "ಆರ್ಥಿಕ ವರ್ಷದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಕಾಮಗಾರಿಗಳ ಪಟ್ಟಿಯನ್ನು ಶಾಸಕರು, ಯಾವ ಜಿಲ್ಲಾಧಿಕಾರಿಯ ಅಧಿಕಾರದ ವ್ಯಾಪ್ತಿಯೊಳಗೆ ನಿರ್ವಹಿಸಬೇಕಾಗಿದೆಯೋ ಆ ಜಿಲ್ಲಾಧಿಕಾರಿಗಳಿಗೆ ಆರ್ಥಿಕ ವರ್ಷ ಪ್ರಾರಂಭಗೊಂಡಂತೆಯೇ ಸಲ್ಲಿಸಲು ಹಾಗೂ ಈ ಅನುದಾನವನ್ನು ಎರಡು ವರ್ಷಗಳ ಒಳಗೆ ಪ್ರಸ್ತಾವನೆ ಸಲ್ಲಿಸಲು ಅವಕಾಶವಿದೆ. |
| ಆ) | ಹಾಗಿದ್ದಲ್ಲಿ, ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಸರ್ಕಾರಿದಿಂದ ಯಾವ ಕ್ರಮ ಜರುಗಿಸಲಾಗುವುದು: | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ತ್ರೈಮಾಸಿಕ ಅನುದಾನದ ಬಿಡುಗಡೆ ಆದೇಶಗಳಲ್ಲಿ ಸ್ಪಷ್ಟ ಸೂಚನೆ ನೀಡಲಾಗುತ್ತಿದೆ. |
| ಇ) | ಶಾಸಕರುಗಳಿಗೆ ನೀಡಲಾದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಆಯಾ ಸಾಲಿನಲ್ಲಿ ಉಳಿತಾಯ ಖಾತೆಯಲ್ಲಿನ ಅನುದಾನಕ್ಕೆ ಪ್ರಸ್ತಾವನೆ ನೀಡಲು ಅವಕಾಶ ಇಲ್ಲದಿದ್ದಲ್ಲಿ ಅವಕಾಶ ಮಾಡಿಕೊಡಲು ಸರ್ಕರದಿಂದ ಯಾವ ಕ್ರಮ ಜರುಗಿಸಲಾಗುವುದು: (ಮಾಹಿತಿ ಒದಗಿಸುವುದು) | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಆಯಾ ಸಾಲಿನಲ್ಲಿ ಉಳಿತಾಯವಾಗುವ ಅನುದಾನಕ್ಕೆ ಎರಡು ವರ್ಷಗಳ ಒಳಗೆ ಕ್ರಿಯಾ ಯೋಜನೆ ನೀಡಲು ಅವಕಾಶವಿರುತ್ತದೆ. |

ಸಂಖ್ಯೆ:ಕೆಎಲ್ಎಸ್/29/ಕೆಎಲ್ಎಸ್/2025

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು